

# ಹೊಸ ವರ್ಷದ ಹಾರ್ದಿಕ ಅಭಿನಂದನೆಗಳು – 2017

ಆತ್ಮೀಯರೇ,

ನವವರ್ಷದ ಪ್ರಾರಂಭದೊಂದಿಗೆ ಹೊಸ ಸಂಕಲ್ಪಗಳು, ಹೊಸ ಆಶಯಗಳು, ಹೊಸ ಹುರುಪು ನಿಮ್ಮ ಮನಃಪಟಲದಲ್ಲಿ ನಲಿದಾಡಲಿ. ಭಗವಂತನು ನಿಮ್ಮೆಲ್ಲರಿಗೂ ಆರೋಗ್ಯಭಾಗ್ಯವನ್ನೂ, ಶಾಂತಿ-ನೆಮ್ಮದಿಗಳನ್ನೂ ದಯಪಾಲಿಸಲಿ; ನಮ್ಮ ಈ ತಾಯ್ನಾಡಲ್ಲಿ ಸಮೃದ್ಧಿಯನ್ನೂ, ಪರಸ್ಪರ ಸೌಹಾರ್ದವನ್ನೂ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

'ಭಗಿನಿ ನಿವೇದಿತಾ', 'ಲೋಕಮಾತೆ ನಿವೇದಿತಾ' ಎಂದು ಪ್ರಸಿದ್ಧಳಾಗಿರುವ ಸ್ವಾಮಿ ವಿವೇಕಾನಂದರ ಧೀರ ಶಿಷ್ಯೆ 'ಮಾರ್ಗರೆಟ್ ನೋಬಲ್'ಳ ೧೫೦ನೇ ಜನ್ಮದಿನ ೨೦೧೭ರ ನವೆಂಬರ್ ೨೮ ರಂದು ಆಚರಿಸಲ್ಪಡುತ್ತದೆ. ಭಾರತಕ್ಕೆ ಬಂದು, ಭಾರತೀಯತೆಯನ್ನು ಶ್ರದ್ಧೆಯಿಂದ ತನ್ನದಾಗಿಸಿಕೊಂಡು ಇಲ್ಲಿನ ಮಹಿಳೆಯರ ಹಾಗೂ ಸಮಾಜದ ಏಳ್ಗೆಗಾಗಿ ನಿರಂತರ ಪರಿಶ್ರಮಿಸಿದ ಈಕೆಯ ಜೀವನ ಅಸಾಮಾನ್ಯ , ಅನುಕರಣೀಯ. ಇಂದು ನಮ್ಮ ರಾಷ್ಟ್ರವನ್ನು ಪುನಃ ಎಚ್ಚರಗೊಳಿಸಬೇಕಾಗಿದೆ. ಆಧುನಿಕತೆಯ ರಭಸದಲ್ಲಿ ನಮ್ಮ ನಾಡಿನ ಉದಾತ್ತ ಪರಂಪರೆ, ಮೌಲ್ಯಗಳನ್ನು ನಾವು ಮಕ್ಕಳಿಗೆ ನೀಡದೆ ವಂಚಿಸುತ್ತಿದ್ದೇವೆ; ಅವರ ಭವಿಷ್ಯವನ್ನು ಕರಾಳಗೊಳಿಸುತ್ತಿದ್ದೇವೆ. ನಾವೆಲ್ಲ ಭಾರತದ ಪುನರುತ್ಥಾನಕ್ಕಾಗಿ ಕಂಕಣಬದ್ಧರಾಗಿ ದುಡಿಯೋಣ, ನಮ್ಮ ಸಮಾಜ ಹಾಗೂ ಎಲ್ಲ ಜನರ ತನುಮನಗಳಲ್ಲಿ ನವಚೇತನವನ್ನು ತುಂಬೋಣ.

'ವಿವೇಕಪ್ರಭ' ಪತ್ರಿಕೆಯ ಮೂಲಕ  ರಾಮಕೃಷ್ಣ-ವಿವೇಕಾನಂದರ ಸಮನ್ವಯ ವಾಣಿಯನ್ನು ಬಿತ್ತರಿಸುವಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಆಶ್ರಮಗಳಿಗೆ, ಸಂಸ್ಥೆಗಳಿಗೆ, ಸ್ವಯಂಸೇವಕರಿಗೆ, ಬಂಧುಮಿತ್ರರಿಗೆ, ಸಿಬ್ಬಂದಿ ವರ್ಗದವರಿಗೆ, ಜಾಹೀರಾತುದಾರರಿಗೆ, ಅಚ್ಚುಕಟ್ಟಾಗಿ ಮುದ್ರಿಸುತ್ತಿರುವ ಮುದ್ರಕರಿಗೆ, ಸರಕಾರಿ ಇಲಾಖೆಗಳಿಗೆ, ಅಂಚೆಕಛೇರಿಯವರಿಗೆ ಪ್ರೀತಿಯ ಧನ್ಯವಾದಗಳು. ತಮ್ಮೆಲ್ಲರ ಸಹಕಾರವು ನಮ್ಮ ಈ ನೆಚ್ಚಿನ ಪತ್ರಿಕೆಯನ್ನು ಮನೆಮನೆಗೆ, ಮನಮನಕ್ಕೆ ಮುಟ್ಟಿಸಲಿ ಎಂದು ಆಶಿಸುತ್ತೇವೆ. ನಿಮ್ಮ ಬೆಂಬಲ ಹಾಗೂ ಪ್ರೋತ್ಸಾಹವು ನಮಗೆ ಹೊಸ ಹೊಸ ಮೈಲಿಗಲ್ಲುಗಳನ್ನು ದಾಟುವಂತೆ ಮಾಡಲಿ.

ಜೈ ಭಾರತಮಾತೆ! ಜೈ ರಾಮಕೃಷ್ಣ!

ಭಗವತ್ಸೇವೆಯಲ್ಲಿ ತಮ್ಮ

**ಸ್ವಾಮಿ ಆತ್ಮಜ್ಞಾನಂದ**

ವ್ಯವಸ್ಥಾಪಕ ಸಂಪಾದಕರು